Akashvani : Bengaluru
National Bulletin In Kannada
20.10.2025 : 1910hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಕಳೆದ ದಶಕದಲ್ಲಿ ಮೂರು ಪಟ್ಟು ಹೆಚ್ಚಿದ ಭಾರತದ ರಕ್ಷಣಾ ಉತ್ಪಾದನೆ - ಪ್ರಧಾನಿ ನರೇಂದ್ರ ಮೋದಿ
- ದೀಪಾವಳಿ ಆಚರಣೆ ; ದೇಶ-ವಿದೇಶಗಳಿಂದ ಶುಭಹಾರೈಕೆಗಳ ಮಹಾಪೂರ - ಪಟಾಕಿ ಮಾರಾಟ ಗಮನಾರ್ಹ ಏರಿಕೆ
- ನಾಳೆಯಿಂದ ನಾಲ್ಕು ದಿನಗಳ ಕಾಲ ರಾಷ್ಟ್ರಪತಿ ದ್ರೌಪದಿ ಮುರ್ಮು ಕೇರಳ ಪ್ರವಾಸ
- ದೀಪಾವಳಿ ಹಬ್ಬಗಳ ಸಂದರ್ಭದಲ್ಲಿ ಸುಮಾರು ೮ ಸಾವಿರ ವಿಶೇಷ ರೈಲು ಓಡಿಸಲು ಭಾರತೀಯ ರೈಲ್ವೇ ಯೋಜನೆ

><><><><><

ಕಳೆದ ದಶಕದಲ್ಲಿ ಭಾರತದ ರಕ್ಷಣಾ ಉತ್ಪಾದನೆ ಮೂರು ಪಟ್ಟು ಹೆಚ್ಚಾಗಿ ೧.೫ ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಗೋವಾ ಮತ್ತು ಕಾರವಾರ ಕರಾವಳಿಯಲ್ಲಿರುವ ಐಎನ್‌ಎಸ್ ವಿಕ್ರಾಂತ್‌ನಲ್ಲಿ ನೌಕಾಪಡೆಯ ಸಿಬ್ಬಂದಿಯೊಂದಿಗೆ ದೀಪಾವಳಿ ಆಚರಿಸುವ ಸಂದರ್ಭದಲ್ಲಿ ಮಾತನಾಡಿದ ಅವರು, ೨೦೧೪ರಿಂದ ಇಂದಿನವರೆಗೆ ೪೦ಕ್ಕೂ ಹೆಚ್ಚು ಸ್ಥಳೀಯವಾಗಿ ನಿರ್ಮಿತ ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿಗಳು

ನೌಕಾಪಡೆಗೆ ಹಸ್ತಾಂತರಿಸಲಾಗಿದೆ. ಇಂದಿನ ಭಾರತ ಬಹುತೇಕ ರಕ್ಷಣಾ ಸಾಧನಗಳನ್ನು ದೇಶದಲ್ಲೇ ತಯಾರಿಸುತ್ತಿದೆ ಮತ್ತು ಸರಾಸರಿಯಾಗಿ ಪ್ರತಿ ೪೦ ದಿನಗಳಿಗೊಮ್ಮೆ ಒಂದು ಹೊಸ ಯುದ್ಧ ನೌಕೆ ಅಥವಾ ಜಲಾಂತರ್ಗಾಮಿ ನೌಕಾಪಡೆಗೆ ಸೇರ್ಪಡೆಗೊಳ್ಳುತ್ತಿದೆ ಎಂದರು.

ಧ್ವನಿ - ಪ್ರಧಾನಿ ನರೇಂದ್ರ ಮೋದಿ - (೨೨ ಸೆಕೆಂಡ್ಸ್)

ಭಾರತೀಯ ಸೇನೆ, ವಾಯುಪಡೆ ಮತ್ತು ನೌಕಾಪಡೆಯ ನಡುವಿನ ಅಸಾಧಾರಣ ಸಮನ್ವಯವು ಅಪರೇಷನ್ ಸಿಂದೂರ ಸಮಯದಲ್ಲಿ ಪಾಕಿಸ್ತಾನವನ್ನು ಶರಣಾಗುವಂತೆ ಮಾಡಿತು. ಐಎನ್ಎಸ್ ವಿಕ್ರಾಂತ್, ಆತ್ಮನಿರ್ಭರ ಭಾರತ ಮತ್ತು ಮೇಡ್ ಇನ್ ಇಂಡಿಯಾದ ಶ್ರೇಷ್ಠ ಸಂಕೇತವಾಗಿದೆ ಎಂದರು.

><><><><

ದೀಪಾವಳಿ ಹಬ್ಬದ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ರಾಷ್ಟ್ರದ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ. ದೀಪಾವಳಿಯು ಭಾರತದ ಅತ್ಯಂತ ಜನಪ್ರಿಯ ಹಬ್ಬಗಳಲ್ಲಿ ಒಂದಾಗಿದೆ. ಇದನ್ನು ಅತ್ಯಂತ ಉತ್ಸಾಹದಿಂದ ಆಚರಿಸಲಾಗುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ದೀಪಾವಳಿಯು ಕೆಟ್ಟದ್ದರ ಮೇಲೆ ಒಳ್ಳೆಯತನದ ವಿಜಯವನ್ನು ಮತ್ತು ಅಜ್ಞಾನದ ಮೇಲೆ ಜ್ಞಾನದ ವಿಜಯವನ್ನು ಆಚರಿಸುತ್ತದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ತಮ್ಮ ಸಂದೇಶದಲ್ಲಿ ಹೇಳಿದ್ದಾರೆ. ಈ ದೀಪಗಳ ಹಬ್ಬವು ಪ್ರತಿಯೊಬ್ಬ ನಾಗರಿಕರ ಜೀವನವನ್ನು ಸಾಮರಸ್ಯ, ಸಂತೋಷ ಮತ್ತು ಸಮೃದ್ಧಿಯಿಂದ ಬೆಳಗಿಸಲಿ. ದೇಶಾದ್ಯಂತ ಸಕಾರಾತ್ಮಕತೆಯ ಮನೋಭಾವ ಮೇಲುಗೈ ಸಾಧಿಸಲಿ ಎಂದು

ಪ್ರಧಾನಿ ನರೇಂದ್ರ ಮೋದಿ ಪ್ರಾರ್ಥಿಸಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಭೇಟಿಯಾಗಿ ದೀಪಾವಳಿಯ ಶುಭಾಶಯಗಳನ್ನು ಕೋರಿದರು. ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರೂ ಕೂಡ ರಾಷ್ಟ್ರಪತಿ ಮುರ್ಮು ಅವರನ್ನು ಭೇಟಿಯಾಗಿ ದೀಪಾವಳಿಯ ಶುಭಾಶಯಗಳನ್ನು ತಿಳಿಸಿದರು. ದೀಪವಳಿಯ ಪ್ರಯುಕ್ತ ವಿದೇಶಗಳು ಹಾಗೂ ಇಲ್ಲಿರುವ ರಾಯಭಾರ ಕಚೇರಿಗಳಿಂದ ಶುಭಹಾರೈಕೆಗಳು ಹರಿದುಬರುತ್ತಿವೆ.  ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ದೀಪಾವಳಿಯ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಅವರು, ಇತ್ತೀಚನ ಅವರ ಭಾರತ ಭೇಟಿಯನ್ನು ನೆನಪಿಸಿಕೊಂಡಿದ್ದು, ಭಕ್ತಿ, ಸಂತೋಷ ಮತ್ತು ಉತ್ತಮ ಸಂಬಂಧಗಳ ಪ್ರತೀಕವಾಗಿ, ತಮ್ಮ ಭೇಟಿಯ ವೇಳೆ ಮುಂಬೈನಲ್ಲಿ ದೀಪ ಬೆಳಗಿಸಿದ್ದಾಗಿ ತಿಳಿಸಿದ್ದಾರೆ. ಇನ್ನು ಫಿನ್ಲ್ಯಾಂಡ್, ಇಸ್ರೇಲ್, ಆಸ್ಟ್ರಿಯಾ, ಬ್ರೆಜಿಲ್, ಐರೋಪ್ಯ ಒಕ್ಕೂಟ ಮತ್ತು ಸ್ವಿಟ್ಜರ್ಲೆಂಡ್ ಸೇರಿದಂತೆ ಇಲ್ಲಿರುವ ವಿವಿಧ ರಾಯಭಾರ ಕಛೇರಿಗಳು ಇಂದು  ದೀಪಾವಳಿಯ ಸಂದರ್ಭದಲ್ಲಿ ಜನರಿಗೆ ಶುಭಾಶಯಗಳನ್ನು ಕೋರಿವೆ.

><><><><

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಲ್ಕು ದಿನಗಳ ಕೇರಳ ಭೇಟಿಗಾಗಿ ನಾಳೆ ತಿರುವನಂತಪುರಂಗೆ ತೆರಳಲಿದ್ದಾರೆ.  ನಾಡಿದ್ದು, ರಾಷ್ಟ್ರಪತಿಗಳು ಶಬರಿಮಲೆ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆಯಲಿದ್ದಾರೆ. ಇದೇ ೨೩ ರಂದು ಅವರು, ತಿರುವನಂತಪುರಂನ ರಾಜಭವನದಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದು, ನಾರಾಯಣ ಗುರು ಸಮಾಧಿಯ ಶತಮಾನೋತ್ಸವ ಸಮಾರಂಭದಲ್ಲಿಯೂ ಭಾಗವಹಿಸಲಿದ್ದಾರೆ.

ಇದರ ಜೊತೆಗೆ ರಾಷ್ಟ್ರಪತಿ, ಪಾಲಾದಲ್ಲಿ ಸೇಂಟ್ ಥಾಮಸ್ ಕಾಲೇಜು ಮತ್ತು ಎರ್ನಾಕುಲಂನಲ್ಲಿ ಸೇಂಟ್ ತೆರೇಸಾ ಕಾಲೇಜಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

><><><><

ದೀಪಾವಳಿ ಮತ್ತು ಛತ್ ಹಬ್ಬಗಳ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆಯಲ್ಲಿನ ನಿರೀಕ್ಷಿತ ಹೆಚ್ಚಳವನ್ನು ಪೂರೈಸಲು, ಭಾರತೀಯ ರೈಲ್ವೆ, ಮುಂದಿನ ದಿನಗಳಲ್ಲಿ ಸುಮಾರು ೮ ಸಾವಿರ ವಿಶೇಷ ರೈಲುಗಳನ್ನು ಓಡಿಸಲು ಯೋಜಿಸಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಇಂದು ನವದೆಹಲಿಯಲ್ಲಿ ಇರುವ ರೈಲ್ವೆ ಮಂಡಳಿಯ ವಾರ್ ರೂಮ್‌ಗೆ ಭೇಟಿ ನೀಡಿದರು. ಭೇಟಿಯ ಸಂದರ್ಭದಲ್ಲಿ ಅವರು ಹಬ್ಬದ ಕಾಲದಲ್ಲಿ ಪ್ರಯಾಣಿಕರ ದಟ್ಟನೆಯ ಸ್ಥಿತಿಗತಿಯನ್ನು ಪರಿಶೀಲಿಸಿದರು. ಇದೇ ವೇಳೆ ಅವರು, ದಿನದ ೨೪ ಗಂಟೆಯೂ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ಮನೋಬಲವನ್ನು ಉತ್ತೇಜಿಸಿ, ದೀಪಾವಳಿಯ ಶುಭಾಶಯಗಳನ್ನು ಕೋರಿದರು. ಪೂಜೆ, ದೀಪಾವಳಿ ಮತ್ತು ಛತ್ ಸಮಯದಲ್ಲಿ ಸುಗಮ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು, ಈ ವರ್ಷ ಭಾರತೀಯ ರೇಲ್ವೇ ೧೨ ಸಾವಿರದ ೧೧ ವಿಶೇಷ ರೈಲುಗಳನ್ನು ಓಡಿಸುತ್ತಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ೭ ಸಾವಿರದ ೭೨೪ ರೈಲುಗಳಿಗಿಂತ ಇದು ಗಮನಾರ್ಹ ಹೆಚ್ಚಳವಾಗಿದೆ. ಭಾರತೀಯ ರೈಲ್ವೆ ಅಕ್ಟೋಬರ್ ೧ ರಿಂದ ನಿನ್ನೆಯವರೆಗೆ ೩ ಸಾವಿರದ ೯೬೦ ವಿಶೇಷ ರೈಲುಗಳನ್ನು ಯಶಸ್ವಿಯಾಗಿ ಓಡಿಸಿದೆ ಎಂದು ಭಾರತೀಯ ರೇಲ್ವೇ ಹೇಳಿಕೆಯಲ್ಲಿ ತಿಳಿಸಿದೆ.

><><><><

ಈ ವರ್ಷದ ಅಯೋಧ್ಯೆಯ ದೀಪಾವಳಿ ಸಂಭ್ರಮಾಚರಣೆಯ ಭಾಗವಾಗಿ ನಡೆದ ದೀಪೋತ್ಸವವು ಹೊಸ ವಿಶ್ವದಾಖಲೆ ನಿರ್ಮಿಸಿದೆ. ಸರಯೂ ನದಿಯ ತೀರದಲ್ಲಿ ೨೬.೧೭ ಲಕ್ಷ ದೀಪಗಳು ಬೆಳಗಿಸಲ್ಪಟ್ಟಿದ್ದು, ೨, ಸಾವಿರದ ೧೨೮ ಭಕ್ತರು ಏಕಕಾಲಕ್ಕೆ  ಆರತಿ ನಡೆಸಿದರು. ಈ ಎರಡೂ ಸಾಧನೆಗಳಿಗೆ ಗಿನ್ನೆಸ್ ವಿಶ್ವ ದಾಖಲೆ ಸಂಸ್ಥೆ ಸ್ಥಳದಲ್ಲೇ ಪ್ರಮಾಣಪತ್ರ ನೀಡಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ನೇತೃತ್ವದ ಈ ಕಾರ್ಯಕ್ರಮದಲ್ಲಿ ಸಚಿವ ಅನಿಲ್ ರಾಜಭರ್, ದೀಪೋತ್ಸವವು ಭಾರತದ ಸಂಸ್ಕೃತಿ ಮತ್ತು ಏಕತೆಯ ಸಂಕೇತವಾಗಿದೆ. ಅಯೋಧ್ಯೆ ಈಗ ವಿಶ್ವದ ಆಧ್ಯಾತ್ಮಿಕ ನಕ್ಷೆಯಲ್ಲಿ ಪ್ರಭಾವ ಮೂಡಿಸಿದೆ ಎಂದರು

><><><><

ಆಪರೇಷನ್ ಫೈರ್ ಟ್ರೇಲ್ ಕಾರ್ಯಾಚರಣೆಯಡಿ ಆದಾಯ ಗುಪ್ತಚರ ನಿರ್ದೇಶನಾಲಯ ಡಿಆರ್ಐ ಚೀನಾದಿಂದ ಭಾರತಕ್ಕೆ ನಡೆಯುತ್ತಿದ್ದ ಪಟಾಕಿ ಕಳ್ಳಸಾಗಣೆಯನ್ನು ಪತ್ತೆಹಚ್ಚಿದೆ. ನವ ಶೇವಾ ಬಂದರಿನಲ್ಲಿ ಚೀನಾದಿಂದ ಬಂದಿದ್ದ ೪೦ ಅಡಿ ಉದ್ದದ ಕಂಟೈನರ್‌ನ್ನು ಅಧಿಕಾರಿಗಳು ತಪಾಸಣೆ ನಡೆಸಿದಾಗ, ಅದು “ಲೆಗ್ಗಿಂಗ್ಸ್” ಎಂದು ಘೋಷಿಸಲ್ಪಟ್ಟಿದ್ದರೂ ಒಳಗೆ ೪೬ ಸಾವಿರದ ೬೪೦ ಪಟಾಕಿಗಳನ್ನು ಕಳ್ಳಸಾಗಣೆ ಮಾಡಲಾಗುತ್ತಿದ್ದುದನ್ನು ಪತ್ತೆಹಚ್ಚಿದರು.

><><><><

೨೦೨೫ ರ ಬಿಹಾರ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕೊನೆಯ ದಿನವಾದ ಇಂದು ರಾಷ್ಟ್ರೀಯ ಜನತಾ ದಳ - ಆರ್‌ಜೆಡಿ ಅಧಿಕೃತವಾಗಿ ೧೪೩ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿತು. ಈ ಪಟ್ಟಿಯಲ್ಲಿ ತೇಜಸ್ವಿ ಯಾದವ್ ಪುನಃ ತಮ್ಮ ಸಾಂಪ್ರದಾಯಿಕ ರಾಘೋಪುರ ಸ್ಥಾನದಿಂದ ಸ್ಪರ್ಧಿಸಲಿದ್ದಾರೆ.

><><><><

ಯೆಮೆನ್‌ನ ಏಡೆನ್ ಕರಾವಳಿಯಲ್ಲಿ ಕ್ಯಾಮರೂನ್ ದೇಶದ ಹಡಗೊಂದರಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ೧೨ ಭಾರತೀಯ ಸಿಬ್ಬಂದಿಯನ್ನು ರಕ್ಷಿಸಲಾಗಿದೆ ಎಂದು ಐರೋಪ್ಯ ಒಕ್ಕೂಟದ ನೌಕಾದಳ ಮಾಹಿತಿ ನೀಡಿದೆ.

><><><><

ಮುಂಬೈನಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ, ಇನ್ನಿಂಗ್ಸ್ ಅಂತ್ಯಕ್ಕೆ ೪೮.೪ ಓವರ್‌ಗಳಲ್ಲಿ ತನ್ನೆಲ್ಲ  ವಿಕೆಟ್ ಕಳೆದುಕೊಂಡು ೧೦೧ ರನ್ ಮಾಡಿದ್ದು, ಬಾಂಗ್ಲಾದೇಶಕ್ಕೆ ೧೦೨ ರನ್‌ಗಳ ಗುರಿ ನೀಡಿದೆ.  ಗುರಿ ಬೆನ್ನಟ್ಟಿರುವ ಬಾಂಗ್ಲಾದೇಶ ಇತ್ತೀಚಿನ ವರದಿ ಬಂದಾಗ --- ಓವರ್‌ಗಳಲ್ಲಿ --- ವಿಕೆಟ್ ನಷ್ಟಕ್ಕೆ --- ರನ್ ಗಳಿಸಿ ಆಡುತ್ತಿದೆ. ನಾಳೆ ಕೊಲೊಂಬೊದ ಆರ್.ಪ್ರೇಮದಾಸ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ಮದ್ಯಾಹ್ನ ೨ ಗಂಟೆಗೆ ಆರಂಭವಾಗಲಿದೆ.

><><><><

ಇಸ್ರೇಲ್ ತನ್ನ ಮಾರಕ ದಾಳಿಗಳನ್ನು ಮುಂದುವರಿಸಿದ್ದರೂ ಸಹ, ಹಮಾಸ್ ಮತ್ತು ಇಸ್ರೇಲ್ ನಡುವಿನ ಕದನ ವಿರಾಮ ಮುಂದುವರೆದಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ,

><><END<><><